# ಮನೆ ಮನಸ್ಸಿಗೆ ಡಿಟಾಕ್ಸ್ ತುಳಸಿ



**ಸಸ್ಯಪ್ರೇಮಿಗಳಿಲ್ಲದ ಮನೆಯಲ್ಲೂ ಕಂಡುಬರುವ ಸಸ್ಯ ತುಳಸಿ. ಆದರೆ ಇದನ್ನು ಸಮೃದ್ಧವಾಗಿ ಬೆಳೆಸಲು ಬಹುಮಂದಿ ಸೋಲುತ್ತಾರೆ. ತುಳಸಿ ಗಿಡವನ್ನು ಹೇಗೆ ಪೋಷಿಸಬೇಕು? ಇಲ್ಲಿದೆ ಸರಳ ಸಲಹೆ.**

**■ ಸೀಮಾ ಹೆಗಡೆ**

ಲಕ್ಷ್ಮಿ ರೂಪವಾಗಿ, ವಿಷ್ಣುವಿನ ಮಡದಿಯಾಗಿ, ಪ್ರತಿ ಮನೆಯಲ್ಲೂ ನೆಲೆಸಿರುವವಳು 'ತುಳಸಿ'. ಪುರಾಣ ಕಥೆಗಳು ಸತ್ಯವೋ ಮಿಥ್ಯವೋ, ಆದರೆ ಸಸ್ಯವೊಂದನ್ನು ಈ ಮಟ್ಟಕ್ಕೆ ಗೌರವಿಸಲಾಗುತ್ತದೆಂದರೆ, ಅದಕ್ಕೆ ಕಾರಣ ಆ ಸಸ್ಯದಿಂದಾಗುವ ಅಗಾಧ ಅನುಕೂಲಗಳು.

ಅಲಂಕಾರಿಕವಾಗಿ ಗಾರ್ಡನ್‌ನಲ್ಲಿ, ಕೆಲವೆಡೆ ಅಡುಗೆಗೂ ಬಳಕೆಯಲ್ಲಿರುವ ತುಳಸಿಯ ಔಷಧೀಯ ಗುಣಗಳಂತೂ ಪಟ್ಟಿ ಮಾಡಲಾಗದಷ್ಟು ಅಧಿಕ. ತುಳಸಿ ನಮ್ಮ ಮನೆ–ಮನಸ್ಸು ಎರಡನ್ನೂ ಡಿಟಾಕ್ಸ್ ಮಾಡಬಲ್ಲದು. ಆದ್ದರಿಂದ ಮನೆ ಎದುರೇ ಕೈಗೆಟುಕುವ ದೂರದಲ್ಲಿ ಈ ಸಸ್ಯ ಬೆಳೆಸುವ ಹಿರಿಯರ ರೂಢಿ ಸಮಂಜಸ.

ಪುದೀನಾ, ಕಾಮಕಸ್ತೂರಿ ಸಸ್ಯಗಳ ಕುಟುಂಬಕ್ಕೆ ಸೇರಿದ ತುಳಸಿಯಲ್ಲಿ ಹಲವಾರು ಬಗೆ. 'ಹೋಲಿ ಬೆಸಿಲ್', 'ಓಸಿಮಮ್ ಸ್ಯಾಂಕ್ಟಮ್' (ಟೆನುಫ್ಲೋರಮ್) ಎಂದು ಕರೆಸಿಕೊಳ್ಳುವ (ಸ್ಯಾಂಕ್ಟಮ್ ಎಂದರೆ ಪವಿತ್ರವಾದ ಸ್ಥಳವೆಂಬ ಅರ್ಥವಿದೆ) ಹಸುರು ಎಲೆಯ ರಾಮ ತುಳಸಿಯನ್ನು ಮತ್ತು ಕಪ್ಪು ಎಲೆಯ ಕೃಷ್ಣ ತುಳಸಿಯನ್ನು ಭಾರತದೆಲ್ಲೆಡೆ ಕಾಣಬಹುದು.

ಸುಗಂಧಭರಿತ ಸಸ್ಯಗಳ ಗುಂಪಿಗೆ ಸೇರುವ ತುಳಸಿಯನ್ನು ಪರಿಮಳಯುಕ್ತ ದ್ರವ್ಯಗಳನ್ನು, ಔಷಧಿ ಗುಣಗಳನ್ನು ಪ್ರತ್ಯೇಕಿಸಲು ವಾಣಿಜ್ಯ ಬೆಳೆಯಾಗಿಯೂ ಬೆಳೆಯಲಾಗುತ್ತದೆ.

ಬಹುಶಃ ಸಸ್ಯಪ್ರೇಮಿಗಳಿಲ್ಲದ ಮನೆಯಲ್ಲೂ ಬೆಳೆವ ಸಸ್ಯವೊಂದಿದ್ದರೆ ಅದು ತುಳಸಿ. ಕಟ್ಟೆ ಕಟ್ಟಿ, ಪ್ರದಕ್ಷಿಣೆ ಹಾಕಿ, ದಿನವೂ ನೀರು ಹೊಯ್ದು, ರಂಗೋಲಿ ಎಳೆದು, ಸ್ತೋತ್ರ ಹೇಳಿ ಹಸಿರ ಸಮೃದ್ಧಿಯನ್ನು ಬರಮಾಡಿಕೊಳ್ಳುವ ಈ ಧಾರ್ಮಿಕ ನಂಬಿಕೆ ಸೂಕ್ಷ್ಮವಾಗಿ ಸಸ್ಯಪಾಲನೆಯೆಡೆ ಬೊಟ್ಟು ಮಾಡುವುದು ವಿಶೇಷ. ಇಷ್ಟೆಲ್ಲಾ ಒಳ್ಳೆಯ ಗುಣಗಳಿರುವ ತುಳಸಿಯನ್ನು ಅಂಗೈ ಅಗಲ ಜಾಗವಿರುವ ಪಟ್ಟಣದ ಬಾಡಿಗೆ ಮನೆಯಲ್ಲೂ ಬೆಳೆಸುವುದು ಆಶ್ಚರ್ಯವಲ್ಲ. ಆದರೆ ಈ ಪ್ರಯತ್ನದಲ್ಲಿ ಬಹಳಷ್ಟು ಬಾರಿ ಸೋತವರು, ಬೇಸರಿಸುವವರನ್ನು ಕಾಣಬಹುದು. ಅಂಥವರಿಗಾಗಿ ಈ ವಿಶೇಷ ಟಿಪ್ಪಣಿ.

ತುಳಸಿ, ಒಂದರಿಂದ ಎರಡು ವರ್ಷ ಅವಧಿಯಲ್ಲಿ ಬೆಳೆದು, ಹೂ ಬೀಜ ಬಿಟ್ಟು ಅಂತ್ಯವಾಗುವ ಏಕವಾರ್ಷಿಕ ಬೆಳೆ. ಅದರ ಕದಿರನ್ನು ಚಿವುಟುವುದರ ಮೂಲಕ ಬಹುವಾರ್ಷಿಕವಾಗಿ ಬೆಳೆಯಬಹುದು. ಆದಾಗ್ಯೂ ಮೂರಕ್ಕಿಂತ ಹೆಚ್ಚು ವರ್ಷಗಳ ಕಾಲ ಅದು ಬದುಕುವುದು ಕಷ್ಟ. ಹಾಗಾಗಿ ನಿಮ್ಮಲ್ಲಿರುವ ತುಳಸಿ ಸತ್ತರೆ ಬೇಸರಿಸಬೇಡಿ.

ತುಳಸಿ ಹೆಚ್ಚು ಕಾಲ ಬದುಕಬೇಕೆಂದರೆ ಕದಿರನ್ನು ಚಿವುಟಬೇಕು. ಇದು ಸಸ್ಯದ ಸಂತಾನೋತ್ಪತ್ತಿಯನ್ನು ಮುಂದೂಡುವುದರ ಮೂಲಕ ಹೆಚ್ಚು ಸಮಯ ಬದುಕುವಂತೆ ಪ್ರೇರೇಪಿಸುತ್ತದೆ. ಜೊತೆಗೆ ಚಿಗುರನ್ನು ಚಿವುಟುವುದು ಹೆಚ್ಚು ಕವಲುಗಳನ್ನು ರೂಪಿಸಿ ಸಸ್ಯ ಪೊದೆಯಂತೆ, ಅಲಂಕಾರಿಕವಾಗಿ ಕಾಣಲು ಸಹಾಯಕ.

ತುಳಸಿ ಆಳವಾದ ತಾಯಿ ಬೇರುಗಳನ್ನು ಹೊಂದಿರುವ ಸಸ್ಯ. ಹಾಗಾಗಿ ಅವುಗಳನ್ನು ನೆಲಕ್ಕೆ ನೆಡುವುದು ಸೂಕ್ತ. ಹೂಕುಂಡದಲ್ಲಿ ನೆಡುವವರು ದೊಡ್ಡದಾದ ಎಂಟು–ಹತ್ತು ಇಂಚಿನ ವ್ಯಾಸದ ಕುಂಡವನ್ನು ಆರಿಸುವುದು ಒಳ್ಳೆಯದು.

ಹೂಕುಂಡದ ಮಣ್ಣಿನ ಮಿಶ್ರಣ ತೀರಾ ಅಂಟು ಅಂಟಾಗಿರದೆ ನೀರು ಬಸಿದು ಹೋಗಲು ಅನುಕೂಲವಾಗುವಂತಿರಬೇಕು. ಮಣ್ಣು, ಮರಳು, ಎರೆಗೊಬ್ಬರ/ಕೊಟ್ಟಿಗೆ ಗೊಬ್ಬರದ ಮಿಶ್ರಣ ಒಳ್ಳೆಯದು. ಹೂಕುಂಡದ ಅಡಿಯಲ್ಲಿ ನೀರು ಬಸಿದುಹೋಗಲು ರಂಧ್ರ ಇರಲೇಬೇಕು.

ಗಿಡ ಸೊಂಪಾಗಿ ಬೆಳೆಯಲು ತಿಂಗಳಿಗೊಮ್ಮೆ ಗೊಬ್ಬರ ಕೊಡಬೇಕಾಗುತ್ತದೆ. ತುಳಸಿ ಹೆಚ್ಚು ನೀರು ಬೇಡುವ ಸಸ್ಯ. ಪ್ರತಿ ದಿನವೂ ಹದವಾಗಿ ನೀರು ಹನಿಸುವುದು ಒಳ್ಳೆಯದು. ಎಲೆಗಳು ಇಳಿಬೀಳುವಂತಾಗುವುದು ನೀರಿನ ಅಭಾವದಿಂದಾದರೆ, ಅಗತ್ಯಕ್ಕಿಂತ ಹೆಚ್ಚು ನೀರು ಎಲೆಗಳ ಉದುರುವಿಕೆಗೆ ಕಾರಣವಾಗುತ್ತದೆ. ಮಣ್ಣಿನ ತೇವಾಂಶ ಆಧರಿಸಿ ನೀರು ಹಾಯಿಸಬೇಕು.

ಪ್ರಕಾಶಮಾನ ಬೆಳಕನ್ನು ಬಯಸುವ ತುಳಸಿಯನ್ನು ಮನೆಯ ಹೊರಗೆ ಬಿಸಿಲು ಬೀಳುವ ಜಾಗದಲ್ಲಿರಿಸಬೇಕು. ನೆರಳಲ್ಲಿಟ್ಟರೂ ಬೆಳಕು ಸಿಗುವಂತಿರಬೇಕು. ತೀರಾ ನೆರಳು, ಕತ್ತಲು ಬೇಡ.

ಒಮ್ಮೆ ಒಣಗಿದ ಗಿಡವನ್ನು ಮತ್ತೆ ಬದುಕಿಸಲಾಗದು. ನೆಲಕ್ಕೆ ಬೇರೂರಿದ ದೊಡ್ಡ ಗಿಡಗಳನ್ನು ಕಿತ್ತು ನೆಡುವುದು ಸಾಧ್ಯವಿಲ್ಲ. ಆಗಷ್ಟೇ ನಾಲ್ಕು ಎಲೆ ಮೂಡಿದ ಸಸ್ಯವನ್ನು ಕಿತ್ತು ನೆಡಬಹುದಾದರೂ ಹಾಗೆ ಮಾಡುವಾಗ ಬೇರಿಗೆ ಪೆಟ್ಟಾಗದಂತೆ ಎಚ್ಚರ ವಹಿಸಬೇಕು.

ವಾತಾವರಣ ಬೆಚ್ಚಗಿರುವ ಬೇಸಿಗೆ ಮತ್ತು ಮಳೆಗಾಲದ ಪೂರ್ವ ಹೊಸ ಗಿಡಗಳನ್ನು ನೆಡಲು ಒಳ್ಳೆಯ ಕಾಲ. ತಂಪನ್ನು ಸ್ವಲ್ಪವೂ ಇಷ್ಟಪಡದ ತುಳಸಿ, ಚಳಿಗಾಲದಲ್ಲಿ ನಿಸ್ತೇಜವಾಗುವುದು ಸಹಜ. ಬೇಸಿಗೆಯಲ್ಲಿ ಮತ್ತೆ ಚಿಗುರಿ ಹೊಸ ಎಲೆ ಹೊರಹಾಕುತ್ತವೆ. ಹಾಗಾಗಿ ಚಳಿಗಾಲದಲ್ಲಿ ಅವುಗಳಿಗೆ ತೊಂದರೆ ಕೊಡದೆ (ಹೂಕುಂಡದ ಮಣ್ಣನ್ನು ಕೆದರುವುದು, ಗಿಡಗಳನ್ನು ಕಿತ್ತು ನೆಡುವುದು, ರಿಪಾಟಿಂಗ್ ಮುಂತಾದ ಕೆಲಸಗಳನ್ನು ಮಾಡದೇ) ಕಾಳಜಿ ಮಾಡುವುದು ಅಗತ್ಯ. ■